ಅಖಿಲ ಭಾರತ ಸೈನಿಕ ಶಾಲೆ ಪ್ರವೇಶ ಪರೀಕ್ಷೆ-2014

ಗಣಿತ ಮತ್ತು ಭಾಷಾ ಜ್ಞಾನ – 6 ನೇ ತರಗತಿ

ಸೂಚನೆಗಳು:-

1. ಈ ಪ್ರಶ್ನೆ ಪತ್ರಿಕೆಯು ಎರಡು ಭಾಗಗಳನ್ನೊಳಗೊಂಡಿರುತ್ತದೆ. ನಾವು ಎರಡು ಭಾಗಗಳ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಬಹುದಾಗಿದೆ.
2. ಭಾಗ –'ಅ' ಗಣಿತದಲ್ಲಿ ಮೂರು ವಿಭಾಗಗಳನ್ನೊಳಗೊಂಡ ಒಟ್ಟು 30 ಪ್ರಶ್ನೆಗಳಿವೆ. ಪ್ರಶ್ನೆ 1 ರಿಂದ 10 ರ ವರೆಗೆ ಪ್ರತಿಯೊಂದಕ್ಕೂ 2 ಅಂಕಗಳು, ಪ್ರಶ್ನೆ 11 ರಿಂದ 20ರ ವರೆಗೆ ಪ್ರತಿಯೊಂದಕ್ಕೂ 3 ಅಂಕಗಳು ಮತ್ತು ಪ್ರಶ್ನೆ 21 ರಿಂದ 30 ರ ವರೆಗೆ ಪ್ರತಿಯೊಂದಕ್ಕೂ 5 ಅಂಕಗಳು.
3. ಭಾಗ – 'ಬ' ಭಾಷಾ ಜ್ಞಾನದಲ್ಲಿ ಒಟ್ಟು 9 ಪ್ರಶ್ನೆಗಳಿವೆ. ಪ್ರಶ್ನೆ 1 ಮತ್ತು 2 ಕ್ಕೆ ತಲಾ 15 ಅಂಕಗಳು ಇರುತ್ತವೆ. ಉಳಿದ ಪ್ರತಿಯೊಂದು ಪ್ರಶ್ನೆಗಳಿಗೆ 10 ಅಂಕಗಳು ಇರುತ್ತವೆ.
4. ತಮ್ಮ ಉತ್ತರಗಳು ನೀಲಿ / ಕಪ್ಪು ಪೆನ್ನಿನಿಂದ ಬರೆಯಿರಿ. ಪೆನ್ಸಿಲ್ ಉಪಯೋಗಿಸಕೂಡದು.
5. ಕಚ್ಚಾ ಕೆಲಸವನ್ನು ನಗದಿತ ಸ್ಥಳದಲ್ಲಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯು 1 ರಿಂದ 21 ರ ವರೆಗೆ ಮುದ್ರಿಸಿದ ಪುಟಗಳು ಹೊಂದಿರುತ್ತದೆ.


ಭಾಗ – "ಅ"– ಗಣಿತ

ವಿಭಾಗ – I (ಪ್ರತಿಯೊಂದು ಪ್ರಶ್ನೆಗೆ 2 ಅಂಕಗಳು)

1. ಒಂದು ವೇಳೆ ಎರಡು ಮ.ಸಾ.ಅ 2 ಮತ್ತು ಅವುಗಳ ಗುಣಲಬ್ಧ 112 ಆದರೆ, ಅವುಗಳ ಲ.ಸಾ.ಅ. ಕಂಡು ಹಿಡಿಯಿರಿ.
2. MDCL ನ್ನು ಹಿಂದು–ಅರೇಬಿಕ್ ಸಂಖ್ಯೆಯಾಗಿ ಪರಿವರ್ತಿಸಿರಿ.
3. ಜಾಪನ ಪತ್ತಿರ $2\frac{1}{2}$ ಕೇಕ್ ಇದೆ. ಆಕಪ ಸ್ನೇಹಿತರು ಕೇಕ್‌ನ $1\frac{2}{3}$ ಭಾಗ ತಿಂದರೆ ಆ ಕೇಕ್‌ನ ಉಳಿದ ಭಾಗ ಪೆಷ್ಟು?
4. ಒಂದು ಆಯತಾಕಾರ ಹೊಲದ ಭುಜಗಳು 36 ಮೀ. ಇವೆ. ಪ್ರತಿ ಮೀಟರ್ ತಂತಿಯ ಬೆಲೆ ರೂ 4.50 ಇದ್ದರೆ, ಆ ಹೊಲದ ಸುತ್ತಲೂ ಬೇಲಿ ಹಾಕಲು ತಗಲುವ ಪೆಚ್ಚು ವೆಚ್ಚ?
5. ಮೊದಲ ಒಂಬತ್ತು ಆವಿಭಾಜ್ಯ ಸಂಖ್ಯೆಗಳ ಸರಾಸರಿಯನ್ನು ಕಂದು ಹಿಡಿಯಿರಿ.
6. ಸಂಕ್ಷೇಪಿಸಿರಿ:


$$\frac{\frac{1}{5} \div \frac{1}{5} \text{ of } \frac{1}{5}}{\frac{1}{5} \text{ of } \frac{1}{5} \div \frac{1}{5}}$$

7. ಒಂದು ರೈಲು ಪ್ರತಿ ಸೆಕೆಂಡಿಗೆ 20 ಮೀ. ಕ್ರಮಿಸುತ್ತದೆ. ಆ ರೈಲಿನ ವೇಗವನ್ನು ಕಿ.ಮಿ. / ಗಂಟೆಯಲ್ಲಿ ಪರಿವರ್ತಿಸಿರಿ.
8. 9,3,7 ಮತ್ತು 1 ಅಂಕೆಯ ಅಂತ್ಯಂತ ದೊಡ್ಡ ಪುಟ್ಟ ಅಂತ್ಯಂತ ಚಿಕ್ಕ ಸಂಖ್ಯೆಗಳನ್ನು ಬರೆಯಿರಿ.
9. ಮಾಯಾಂಕನು ರೂ 20 ಕ್ಕೆ ಒಂದು ಚೆಂಡನ್ನು ವಿರೀದಿಸಿದನು. ಆದನು ಆದನ್ನು ರೂ. 30 ಕ್ಕೆ ಮಾರಿ ಪುನಃ ರೂ. 40 ಕ್ಕೆ ಮರಳಿ ವಿರೀದಿಸುತ್ತಾನೆ. ನಂತರ ಆದನ್ನು ರೂ 50 ಕ್ಕೆ ಮಾರಿದನು. ಅವನಿಗೆ ಲಾಭ ಅಥವಾ ಪಾನಿಯಾಯಿತು? ಅವನಿಗಾದ ಲಾಭ ಅಥವಾ ಪಾನಿಯೆಷ್ಟು?
10. ಕೆಳಗೆ ಕೊಟ್ಟಿರುವ ಆಕೃತಿಯಲ್ಲಿ, ಒಂದು ವೇಳೆ $\angle AOC = x$, $\angle COD = 2x$, $\angle BOD = 3x$, ಇದ್ದರೆ, ಪ್ರತಿಯೊಂದು ಕೋನದ ಅಳತೆ ದಿಗ್ರಿಗಳಲ್ಲಿ ಕಂದು ಹಿಡಿಯಿರಿ.



ವಿಭಾಗ – II (ಪ್ರತಿಂಒಂದು ಪ್ರಶ್ನೆಗೆ 3 ಅಂಕಗಳು)


11. ಬಿಡಿಸಿರಿ: $\frac{2}{7}$ of $[2+\{2\ (11\div4 - 2)\}]-2$
12. 200 ಗ್ರಾಂ, 4.5 ಕಿ.ಜಿ. ಯ ಎಷ್ಟು ಪ್ರತಿಶತ ಆದೆ.
13. ಒಂದು ಬೀಳೆ ರೂ. 12800 ಕ್ಕೆ 2 ವರ್ಷಗಳಿಗೆ ರೂ. 3840 ಸರಳ ಬಡ್ಡಿಯಾದರೆ ಪ್ರತಿವರ್ಷಕ್ಕೆ ಆಗುವ ಬಡ್ಡಿ ದರವನ್ನು ಕಂಡುಹಿಡಿಯಿರಿ.
14. ಒಂದು ವೃತ್ತಾಕಾರದ ಪಾರ್ಕಿನ ಪರಿಧಿಯು 88 ಮೀ. ಆದರೆ, ಆ ಪಾರ್ಕಿನ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.
15. ಕೆಳಗಿನವುಗಳನ್ನು ಏರಿಕೆ ಕ್ರಮದಲ್ಲಿ ಬರೆಯಿರಿ:
$\frac{3}{7}, \frac{4}{5}, \frac{7}{9}, \frac{1}{2}$ ಮತ್ತು $\frac{3}{5}$
16. 6 ನೇಯ ತರಗತಿಯ ಒಬ್ಬ ವಿದ್ಯಾರ್ಥಿ ಪೋಷಣ 450 ಕ್ಕೆ 315 ಅಂಕಗಳನ್ನು ಗಳಿಸಿದ್ದಾನೆ. ಅವನು ಗಳಿಸಿದ ಅಂಕಗಳ ಪ್ರತಿಶತ ಕಂಡುಹಿಡಿಯಿರಿ.
17. ಕೊಟ್ಟಿರುವ ಆಕೃತಿಯಲ್ಲಿ BAC (X^0) ಮತ್ತು CAD(Y^0) ಕೋನಗಳ ಆಳತೆಗಳನ್ನು ಕಂಡುಹಿಡಿಯಿರಿ.



18. ಸಚಿನನು ಪ್ರತಿ ಮೊದಲು ಮತ್ತು ನಾರದನೆಯ ತಿಂಗಳುಗಳಲ್ಲಿ ರೂ. 400, ರೂ. 800 ಮತ್ತು ರೂ. 600 ಕ್ರಮವಾಗಿ ಮೂರನೆಯ ಮತ್ತು ಪಾಲ್ಕನೆಯ ತಿಂಗಳಲ್ಲಿ ಉಳಿಸುತ್ತಾನೆ. ಪಾಲ್ಕು ತಿಂಗಳ ಮಾಸಿಕ ಸರಾಸರಿಯನ್ನು ಕಂಡುಹಿಡಿಯಿರಿ.
19. ಕೆಳಗೆ ಕೊಟ್ಟಿರುವ 5 ನೇಯ ತರಗತಿಯ ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಸರಾಸರಿ 35 ಇದೆ.
26 45 37 43 49 20 X 22 ಮತ್ತು 30.
20. ಕಂಡುಹಿಡಿಯಿರಿ : $1-2+3-4+5-6$ ..... $+19-20$.


ವಿಭಾಗ – III (ಪ್ರತಿಂಒಂದು ಪ್ರಶ್ನೆಗೆ 5 ಅಂಕಗಳು)

21. ಒಂದು ಆಯತ ಮತ್ತು ಒಂದು ವರ್ಗಗಳ ಸುಮನ ಪರಿಧಿ 100 ಮೀ. ಇದೆ. ವರ್ಗದ ಭುಜವನ್ನು ಕಂಡುಹಿಡಿಯಿರಿ.
22. ರಾಕೇಶನು ಒಂದು ಓಟದ ದಾರಿಯನ್ನು ಒಂದು ಸುತ್ತು ಹಾಕಲು 8 ನಿಮಿಷ ಮತ್ತು ಸರೋಜನು 8 ನಿಮಿಷಗಳು ತೆಗೆದುಕೊಳ್ಳುತ್ತಾನೆ. ಒಂದು ವೇಳೆ ಇಬ್ಬರೂ ಏಕ ಕಾಲಕ್ಕೆ ಓಟ ಪ್ರಾರಂಭಿಸಿ ಆವರವರ ವೇಗವನ್ನು ಕಾಯ್ದುಕೊಂಡು ಪುನಃ ಪ್ರಾರಂಭದ ಸ್ಥಳಕ್ಕೆ ಜೊತೆಯಾಗಿ ತಲುಪಲು ಬೇಕಾಗುವ ಸಮಯವೆಷ್ಟು?
23. ಓಟ ಜಕ್ಷನಾಳ ಹೊಸ ಕಾರ್ ವಿರೀದಿಸಲು ರೂ. 20,000 ಅವಶ್ಯಕತೆ ಇತ್ತು. ಬ್ಯಾಂಕ್ ಮ್ಯಾನೇಜರ್ ಮಿ. ದಾಸ್ ಪಾರ್ಟಕ 3% ದರದಂತೆ ಅವರಿಗೆ ಸಾಲ ನೀಡಲು ಒಪ್ಪಿದರು. ಒಂದು ವೇಳೆ ಆ ಸಾಲವನ್ನು 5 ವರ್ಷಗಳ ನಂತರ ಹಿಂದಿರಿಗಿಸಿದರೆ, ಅವರು ಬ್ಯಾಂಕಿಗೆ ಕೊಡಬೇಕಾದ ಒಟ್ಟು ಹಣವೆಷ್ಟು?
24. ಒಂದು ವೇಳೆ AB‖CD ಇದ್ದರೆ, ಕೆಳಗಿನ ಆಕೃತಿಯಲ್ಲಿರುವ X ನ ಅಳತೆಯನ್ನು ಕಂಡುಹಿಡಿಯಿರಿ.



25. ಒಂದು ಸುಪರ್ ಮಾರ್ಕೆಟ್‌ನಲ್ಲಿ 19 ಕತ್ತಳಿಗಳನ್ನು ಪ್ರೂ. 144 ಕ್ಕೆ 22 ದಾಂಬೆಗಳನ್ನು ರೂ.154 ಕ್ಕೆ ಮತ್ತು 17 ಮಾವುಗಳನ್ನು ರೂ.153 ಕ್ಕೆ ಮಾರಲಾಗುತ್ತದೆ. ಇವುಗಳಲ್ಲಿ ಅಂತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುವ ಹಣ್ಣುಗಳಾವವು?

26. 48 ಮೀ. ಉದ್ದ ಮತ್ತು 35 ಮೀ. ಅಗಲವಿರುವ ಒಂದು ಹುಲ್ಲು ಮೈದಾನದ ಹೊರಭಾಗದ ಸುತ್ತ 2.5 ಮೀ. ಅಗಲವಿರುವ ಒಂದು ದಾರಿ ಇದೆ. ಪ್ರತಿ ವರ್ಗ ಮೀ. ಗೆ ರೂ. 4.50 ರಂತೆ, ಆ ದಾರಿಯನ್ನು ಸಮತಲಗೊಳಿಸಲು ತಗಲುವ ವೆಚ್ಚವೆಷ್ಟು?



27. ಒಂದು ಸಂಖ್ಯೆಯು ಇನ್ನೊಂದು ಸಂಖ್ಯೆಗಿಂತ 36 ಅಧಿಕವಾಗಿದೆ. ಒಂದು ವೇಳೆ ಎರಡು ಸಂಖ್ಯೆಗಳ ಮೊತ್ತ 48 ಇದ್ದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

28. ಪಾಲ್ಕು ಬೇರೆ ಬೇರೆ ಅವಿಭಾಜ್ಯ ಆಪವರ್ತನೆಗಳಿರುವ ಅತ್ಯಂತ ಸಣ್ಣ ಸಂಖ್ಯೆಯನ್ನು ಕಂಡುಹಿಡಿಯಿರಿ.

29. ಸಾಲ್ಮಾ ವಿಷ್ಣು ಜಾಣವು $2\frac{1}{2}$ ಜ ರಂತೆ $3\frac{1}{4}$ ವರ್ಷಗಳಿಗೆ ರೂ. 143 ಸರಳ ಬಡ್ಡಿಯಾಗುತ್ತದೆ ?

30. ಒಂದು ಇಟ್ಟಿಗೆಯ ಅಳತೆಯು 20 ಸೆಂ.ಮೀ. ಜ $7\frac{1}{2}$ ಸೆಂ.ಮೀ. ಇದೆ. 25 ಮೀ. ಉದ್ದ, 2 ಮೀ. ಎತ್ತರ ಮತ್ತು $\frac{3}{4}$ ಮೀ. ದಪ್ಪವಿರುವ ಗೋಡೆಯನ್ನು ಕಟ್ಟಲು ಬೇಕಾಗುವ ಇಟ್ಟಿಗೆಗಳೆಷ್ಟು ?

ಭಾಗ – 'ಬ' ಭಾಷಾ ಜ್ಞಾನ

ಅಂಕಗಳು : 100

1. ಕೆಳಗೆ ಕೊಟ್ಟಿರುವ ಯಾವುದಾದರೂ ಒಂದು ವಿಷಯದ ಬಗ್ಗೆ 15 ವಾಕ್ಯಗಳಲ್ಲಿ ಬರೆಯಿರಿ.
   ಅ. ನನ್ನ ಮೆಚ್ಚಿನ ಕ್ರೀಡಾಪಟ್ಟು ಬ. ಭಾರತದ ಪಕ್ಷಿಗಳು

2. ಈ ಕೆಳಗಿನ ಪರಿಚ್ಛೇದವನ್ನು ಲಕ್ಷ್ಯಕೊಟ್ಟು ಓದಿ, ಕೀಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಬರೆಯಿರಿ.
   ಇರುವೆಗಳು ಇತರ ಎಲ್ಲ ಕೀಟಗಳಿಗಿಂತಲು ಅತ್ಯಂತ ಕೌತುಕಮಯವಾದ ಕೀಟಗಳು, ಏಕೆಂದರೆ ಅವು ಅನೇಕ ರೀತಿಯಿಂದ ಮಾನವನಿಗೆ ಸಾಮ್ಯತೆ ಹೊಂದಿವೆ. ಅವು ಕೂಡಾ ತಮಗಾಗಿ ಸ್ವಂತ ಮನೆಗಳನ್ನು ನಿರ್ಮಿಸಿಕೊಂಡು ತಮ್ಮ ಪರಿವಾರದೊಂದಿಗೆ ಬದುಕುತ್ತವೆ ಹಾಗೂ ಒರ್ವ ರಾಜ ಮತ್ತು ರಾಣಿಯರನ್ನು ಹೊಂದಿರುತ್ತವೆ. ಪ್ರತಿಯೊಂದು ಇರುವೆಗೂ ತನ್ನದೇ ಆದ ಮಾಡಬೇಕಾದ ಕೆಲಸವಿರುತ್ತದೆ. ಅದು ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸುತ್ತದೆ. ಅತ್ಯಂತ ಸಣ್ಣ ಇರುವೆಗಳು ಸಾಮಾನ್ಯವಾಗಿ ತಮ್ಮ ಸುತ್ತಲು ಕಟ್ಟಿಕೊಂಡ ಪುಟ್ಟದೆಯ ಗೂಡು ಕುಕೂನ್‌ನಿಂದ ಹೊರಬಂದ ತಕ್ಷಣ ಆಳ್ವಿಕೆ ಪಡೆಯುತ್ತವೆ. ನಂತರ ಬೆಳೆದು ದೊಡ್ಡವಾಗುತ್ತಿದ್ದಂತೆಯೇ ಅವುಗಳ ತ್ವಚೆಯೂ ಕಠಿಣವಾಗುತ್ತ ಹೋಗುತ್ತದೆ. ಆಗ ತಮ್ಮ ಗೂಡನ್ನು ಬಿಟ್ಟುಕೊಡಲು ಸಿದ್ಧವಾಗಿ ವೀರ ವೀರ ಕೆಲಸಗಳನ್ನು ಮಾಡತೊಡಗುತ್ತವೆ. ಅವುಗಳಲ್ಲಿ ಕೆಲ ಇರುವೆಗಳು ಆಹಾರದ ಹುಡುಕಾಟದಲ್ಲಿ ತೊಡಗುತ್ತವೆ. ಆದರೆ ವೀರ ಜಾತಿಯ ಕೀಟಗಳಿಗೆ ಹೋಲಿಸಿ ನೋಡಿದರೆ ಅವು ತಮಗಾಗಿ ಮಾತ್ರ ಆಹಾರ ಹುಡುಕುತ್ತವೆ. ಇರುವೆಗಳು ಹಾಗಲ್ಲ, ತಮ್ಮ ಪರಿವಾರದ ಭಗ್ಗೆಯೂ ಆಲೋಚಿಸುತ್ತವೆ. ಅವು ತಮಗಾಗಿ ಮತ್ತು ಇತರ ಕೆಲಸಗಾರರಿಗಾಗಿ ಆಹಾರವನ್ನು ತರುತ್ತವೆ.
   ಅ. ಇರುವೆಗಳು ಮಾನವನಿಗೆ ಹೇಗೆ ಸಾಮ್ಯತೆಯನ್ನು ಹೊಂದಿವೆ?
   ಬ. ಅತ್ಯಂತ ಸಣ್ಣ ಇರುವೆಗಳು ಯಾವ ಕೆಲಸ ಮಾಡುತ್ತವೆ?
   ಕ. ಕಠಿಣ ಇರುವೆಗಳು ಗೂಡು ಬಿಟ್ಟು ಯಾವಾಗ ಹೊರಬರುತ್ತವೆ?
   ಡ. ಈ ಪರಿಚ್ಛೇದದಲ್ಲಿರುವ ಯಾವ ಪದವು 'ಒಬ್ಬರನ್ನು ಬಿಚ್ಚಗೆ ಮತ್ತೆ ಸುರಕ್ಷಿತವಾಗಿಡುವ ಆವರಣ' ಹೀಗೆ ಅರ್ಥೈಸುತ್ತದೆ?
   ಇ. ಇತರ ಕೀಟಗಳಿಗಿಂತ ಇರುವೆಗಳು ಹೇಗೆ ಭಿನ್ನವಾಗಿವೆ?

3. ಈ ಕೆಳಗಿನ ಪರಿಚ್ಛೇದದಲ್ಲಿ ಗೆರೆಯೆಳೆದ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ. (ಯಾವುದೇ ವಾಕ್ಯವನ್ನು ಪರಿಚ್ಛೇದದಲ್ಲಿರುವಂತೆ ನಕಲು ಮಾಡಕೂಡದು) (10)
   ಹಾಸ್ಯವು ಸಂತೋಷದ ಬದುಕಿನ ಕುರುಹು, ಯಾವ ವ್ಯಕ್ತಿಯು ನಗುತ್ತಿರುತ್ತಾನೆಯೋ ಅವನು ಸಂತೋಷವನ್ನು ಪ್ರಸಂಸುತ್ತಾನೆ ಮತ್ತು ಸ್ನೇಹಿತರನ್ನು ಗೆಲ್ಲುತ್ತಾನೆ. ಹಾಸ್ಯವು ಒಂದು ದಿವ್ಯ-ಶಕ್ತಿವರ್ಧಕ ಔಷಧಿಯಾಗಿದೆ. ಯಾವ ವ್ಯಕ್ತಿಯು ನಗುವದಿಲ್ಲವೋ ಅವನು ಸ್ನೇಹಿತರನ್ನು ಆಕರ್ಷಿಸುವಲ್ಲಿ ವಿಫಲವಾಗುತ್ತಾನೆ, ತನ್ನ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾನೆ ಮತ್ತು ಬದುಕಿನ ಆನಂದವನ್ನು ಕ್ಷೀಣಗೊಳಿಸಿಕೊಳ್ಳುತ್ತಾನೆ.
   ಅ) ..... ಬ) ..... ಕ) ..... ಡ) ..... ಇ) .....

4. ಕೆಳಗೆ ಕೊಟ್ಟ ಶಬ್ದಗಳನ್ನು ಸಾರ್ಥಕ ವಾಕ್ಯಗಳನ್ನು ಮಾಡಿರಿ. (4)
   ಅ. ಜೀವನದಲ್ಲಿ / ವಹಿಸಿ / ಪತ್ರಿಕೆಗಳು / ದಿನನಿತ್ಯದ / ಪ್ರಮುಖ / ಪಾರ್ತ್ರ / ನಮ್ಮ / ಪಾತ್ರ.
   ಬ. ಆಪಹಾಸ್ಯ / ನೀವು / ಕುರಿತು / ಬಾರದು / ಇನ್ನೊಬ್ಬರನ್ನು / ಮೂರ
   ಕ. ಸಂತೋಷದಿಂದ / ಜೀವನ / ತುಂಬಿದ / ಕಣ್ಣೀರಿನಿಂದ / ಎಂಬುದು / ಮತ್ತು
   ಡ. ನರಿಯ / ನಿಂತಿತ್ತು / ಒಂದು / ಕಳಿಗೆ / ಮರದ / ಗುಳ್ಳೆ
   ಇ. ದಿಕ್ಕಿನಲ್ಲಿ / ಪ್ರತಿನಿತ್ಯ / ಪಶ್ಚಿಮ / ಮುಳುಗುತ್ತಾನೆ / ಸೂರ್ಯನು

5. ಕೆಳಗಿನ ವಾಕ್ಯಂಶಗಳಿಗೆ ಒಂದೇ ಪದವನ್ನು ಬರೆಯಿರಿ. (5)
   ಅ. ಓದು ಬಾರದ ವ್ಯಕ್ತಿ ..... ಬ. ಬೇರೆ ದೇಶದಿಂದ ತರಿಸಿದ .....
   ಕ. ಕಡಿಮೆ ಖರ್ಚು ಮಾಡುವವ ..... ಡ. ಕಣ್ಣಿಗೆ ಕಾಣಿಸಲಾರದ .....
   ಇ. ಮುದ್ದೆ ಭೂಮಿಯಲ್ಲಿ ಹೊರಡುವವ .....

6. ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದವನ್ನು ಆಯ್ಕೆಮಾಡಿ ಬಿಟ್ಟ ಸ್ಥಳ ತುಂಬಿರಿ. (5)
   ಅ. ಕಳೆದವಾರ ಅವನು ಒಂದು ಸೈಕಲನ್ನು ..... (ಖರೀದಿಸುತ್ತಾನೆ / ಖರೀದಿಸುವನು / ಖರೀದಿಸಿದನು)
   ಬ. ಮಂಜಾನೆಯಿಂದಲೂ ಮಳೆ ..... (ಸುರಿಯುವದು / ಸುರಿಯತ್ತಿದೆ).
   ಕ. ಅವನು ಸಾಯಂಕಾಲ ಬಹು ಸಪಯದವರೆಗೆ ದೂರದರ್ಶನ ..... (ವಿಕ್ಷಿಸುತ್ತಾರೆ/ವಿಕ್ಷಿಸುತ್ತಾನೆ/ವಿಕ್ಷಿಸುವರು)
   ಡ. ಇಂದು ನಾವು ಸಾಕಷ್ಟು ಕೆಲಸ ..... (ಮಾಡಿದ್ದೆವು / ಮಾಡುತ್ತೇವೆ / ಮಾಡಿದ್ದೇವು)
   ಇ. ಆಪತ್ಕಾಲವಾಗಿ ಅವನು ಅತ್ಯಂತ ವೇಗವಾಗಿ ನೋಟಾರು .....(ಓಡಿಸುತ್ತಿದ್ದನು / ಓಡಿಸುತ್ತಿದ್ದಳು / ಓಡಿಸುತ್ತಿದ್ದರು)

7. ಕೆಳಗಿನ ಪದಗಳನ್ನು ಅರ್ಥವ್ಯತ್ಯಾಸ ಕೊಡುವಂತೆ ಪ್ರತ್ಯೇಕವಾಗಿ ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ. (10)
   ಅ. ಭಾವಟಿ – ಬಾವಿ ಬ. ಪ್ರಕಾರ – ಪ್ರಖರ ಕ. ವರ್ತಕ – ವರ್ತಸ
   ಡ. ನಾಟಿ – ನಾಡಿ ಇ. ಮಸಿ – ಮಸಿ

8. ಕೆಳಗಿನವುಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ (10)
   ಅ. ಗೆಲುವು ..... ಬ. ತಿರಸ್ಕರಿಸು ..... ಕ. ಕ್ರೂರ .....
   ಡ. ಏರಿಕೆ ..... ಇ. ಕೊಡು .....

9. ಕೆಳಗಿನ ಪ್ರತಿಯೊಂದು ನಿದರ್ಶಿಸಿಸಂತೆ ಬದಲಿಸಿರಿ. (10)
   ಅ. ನಾಂದು ಬಿಳಿಯಾಗಲಿದೆ (ಪ್ರಶ್ನಾರ್ಥಕ ವಾಕ್ಯ ಮಾಡಿರಿ) ಬ. ಮಿ. ಮೆವಿರ್ಜ ಚೆನಾ ಭಾಷೆ ಬಲ್ಲವರು (ನಿಷೇಧಾರ್ಥಕ ವಾಕ್ಯ ಮಾಡಿರಿ). ಕ. ಅವಗೆ ನಾನು ತುಂಬ ಚೆನ್ನಾಗಿ ಪರಿಚಿತನಾಗಿರುತ್ತೇನೆ (ಭೂತ ಕಾಲದ ವಾಕ್ಯ ಮಾಡಿರಿ).
   ಡ. ನೀವು ಬಹಳ ಸುಂದರವಾಗಿದ್ದೀರಿ (ಉದ್ಗಾರವಾಚಕ ವಾಕ್ಯ ಮಾಡಿರಿ) . ಇ. ಬಾಲಕರು ನಿನ್ನೆ ಪಾಕ ಆಡಿದರು (ಭವಿಷತ ಕಾಲದ ವಾಕ್ಯ ಮಾಡಿರಿ).

10. ನಿಮ್ಮ ಹುಟ್ಟು ಹಬ್ಬದ ಸಂದರ್ಭದಲ್ಲಿ ನಿಮ್ಮ ಅಣ್ಣ ಕಳುಹಿಸಿಕೊಟ್ಟ ಕಾಣಿಕೆಗಾಗಿ ಧನ್ಯವಾದಗಳನ್ನು ತಿಳಿಸಿ ಪತ್ರ ಬರೆಯಿರಿ.